**ಕರ್ನಾಟಕ ಸರ್ಕಾರ**

ಸಂ: ಲೋಇ:95:ಐಎಫ್ಎ:2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು:ದಿನಾಂಕ:20-04-2010

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು.

ಇವರಿಗೆ,
1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಬೆಂಗಳೂರು.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉ) ಧಾರವಾಡ.

ಮಾನ್ಯರೆ,

ವಿಷಯ:- 2010-11 ನೇ ಸಾಲಿಗೆ ರಾಜ್ಯ ಹೆದ್ದಾರಿಗಳ ನವೀಕರಣ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸುವ ಕುರಿತು

- - -

2010-11ನೇ ಸಾಲಿಗೆ ಆಯವ್ಯಯದಲ್ಲಿ ಇಲಾಖೆಗೆ ಲೆ.ಶೀ. 5054-03-337-0-13-172(Plan) ರಾಜ್ಯ ಹೆದ್ದಾರಿಗಳ ನವೀಕರಣದಡಿ ಒದಗಿಸಲಾಗಿರುವ ಅನುದಾನದಲ್ಲಿ ತಮ್ಮ ವಲಯಗಳ ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿಗಳ ಉದ್ದವನ್ನಾಧರಿಸಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಹಂಚಿಕೆ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ವಲಯ | ರಾಜ್ಯ ಹೆದ್ದಾರಿಗಳ ಉದ್ದ ಕಿಮೀಗಳಲ್ಲಿ | ಹಂಚಿಕೆಮಾಡಬಹುದಾದ ಅನುದಾನ |
|---|---|---|
| ದಕ್ಷಿಣ | 8979 | 6033.00 |
| ಉತ್ತರ | 11926 | 7996.00 |
| **ಒಟ್ಟು:-** | **20905** | **14029.00** |

ಮೇಲಿನ ತಃಖ್ತೆಯಲ್ಲಿ ವಿವರಿಸಲಾಗಿರುವಂತೆ ಒಟ್ಟಾರೆ 20905ಕಿಮೀ ಉದ್ದದ ರಾಜ್ಯ ಹೆದ್ದಾರಿಗಳ ನವೀಕರಣ: ಡಾಂಬರೀಕರಣ ಕಾಮಗಾರಿಗಳಿಗಾಗಿ ರೂ.14029.00ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಇದರನ್ವಯ **ತಮ್ಮ ವಲಯಗಳಿಗೆ** ಹಂಚಿಕೆಯಾದ ಅನುದಾನಕ್ಕನುಗುಣವಾಗಿ ರಾಜ್ಯ ಹೆದ್ದಾರಿಯ ನವೀಕರಣ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಕೆಳಕಂಡ ಮಾರ್ಗಸೂಚಿಗಳನ್ವಯ ಈ ಪತ್ರದೊಂದಿಗೆ ಅಡಕಗೊಳಿಸಿರುವ ನಿಗಧಿತ ನಮೂನೆಯಲ್ಲಿ ರೂಪಿಸಿ ದಿ:26-04-2010ರೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

......2

ಕ್ರಿಯಾ ಯೋಜನೆಯನ್ನು ಈ ಕೆಳಕಂಡ ಮಾರ್ಗಸೂಚಿಗಳನ್ವಯ ರೂಪಿಸತಕ್ಕದ್ದು.

1. ಕ್ರಿಯಾ ಯೋಜನೆಯನ್ನು ವಲಯಗಳಿಗೆ ಹಂಚಿಕೆಯಾಗಿರುವ ಅನುದಾನಕ್ಕೆ ಸೀಮಿತಗೊಳಿಸಿ ತಯಾರಿಸತಕ್ಕದ್ದು.
2. ಕಳೆದ 5 ವರ್ಷಗಳಲ್ಲಿ ಅಂದರೆ 2005-06 ರಿಂದ 2009-10ರವರೆಗೆ ನವೀಕರಣ ಅಥವಾ ಬಲಪಡಿಸುವಿಕೆಯನ್ನು ಕೈಗೊಳ್ಳದೇ ಇರುವ ರಾಜ್ಯ ಹೆದ್ದಾರಿಗಳ ಸರಪಳಿಗಳನ್ನು ಮಾತ್ರ ಪರಿಗಣಿಸುವುದು.
3. ರಸ್ತೆ ಮೇಲ್ಮೈಯ ಬಲಪಡಿಸುವಿಕೆ ಅಥವಾ ಅಗಲಗೊಳಿಸುವಿಕೆ, ಸಿ.ಡಿ ಗಳ ನಿರ್ಮಾಣ: ದುರಸ್ತಿ ಹಾಗೂ ಇನ್ನಿತರ ಯಾವುದೇ ರೀತಿಯ ಕಾರ್ಯವನ್ನು ಕೈಗೊಳ್ಳತಕ್ಕದ್ದಲ್ಲ.
4. ಕೇವಲ ನವೀಕರಣ ಮತ್ತು ಅವಶ್ಯವಿದ್ದಲ್ಲಿ profile corrective course ಗೆ ಮಾತ್ರ ಪ್ರಸ್ತಾವನೆ ಸಲ್ಲಿಸತಕ್ಕದ್ದು.
5. ನವೀಕರಣಗೊಳಿಸಲು ಪ್ರಸ್ತಾವಿಸಲಾಗುವ ರಾಜ್ಯ ಹೆದ್ದಾರಿಯ ಉದ್ದವು ಸಾಧ್ಯವಾದ ಮಟ್ಟಿಗೆ 5.00ಕಿಮೀ ಗಿಂತ ಕಡಿಮೆ ಇರತಕ್ಕದ್ದಲ್ಲ. ವಿಶೇಷ ಪ್ರಕರಣಗಳಲ್ಲಿ ಕಡಿಮೆ ಉದ್ದದ ರಾಜ್ಯ ಹೆದ್ದಾರಿಯನ್ನು ಪ್ರಸ್ತಾಪಿಸಿದಲ್ಲಿ ಇದಕ್ಕೆ ಸೂಕ್ತ ಸಮಜಾಯಿಷಿ ನೀಡತಕ್ಕದ್ದು.
6. ಕಾಮಗಾರಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಗಳನ್ನು ಸಮಾನವಾಗಿ ಗಣನೆಗೆ ತೆಗೆದುಕೊಂಡು ಆಯಾ ವಿಧಾನ ಸಭಾ ಕ್ಷೇತ್ರಗಳ ಶಾಸಕರನ್ನು ಸಂಪರ್ಕಿಸಿ, ರಸ್ತೆಗಳ ನವೀಕರಣ: ಡಾಂಬರೀಕರಣ ಕಾಮಗಾರಿಗಳಿಗೆ ಆದ್ಯತೆ ನೀಡಿ ಕ್ರಿಯಾ ಯೋಜನೆಯನ್ನು ರೂಪಿಸತಕ್ಕದ್ದು.
7. ಅಧಿಕ ವಾಹನ ಸಾಂದ್ರತೆಯುಳ್ಳ ರಾಜ್ಯ ಹೆದ್ದಾರಿಗಳಿಗೆ ಆದ್ಯತೆ ನೀಡುವುದು. ಪ್ರಸ್ತಾವನೆ ಸಲ್ಲಿಸುವಾಗ ಪ್ರತಿಯೊಂದು ರಾಜ್ಯ ಹೆದ್ದಾರಿಯಲ್ಲಿನ ವಾಹನ ಸಾಂದ್ರತೆಯ ಸರಾಸರಿ ವಿವರವನ್ನು ನೀಡುವುದು.
8. ಕ್ರಿಯಾ ಯೋಜನೆಯಡಿ ಸೇರ್ಪಡೆಗೊಳಿಸುವ ಕಾಮಗಾರಿಗಳು ಇತರೆ ಯಾವುದೇ ಯೋಜನೆಗಳಡಿ ಸೇರ್ಪಡೆಗೊಂಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
9. ಕಳೆದ 5 ವರ್ಷಗಳಲ್ಲಿ ಅಂದರೆ 2005-06 ರಿಂದ 2009-10ರವರೆಗೆ ಕೈಗೊಂಡ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಕಾಮಗಾರಿಗಳ ಪಟ್ಟಿಯನ್ನು ಈ ಕೆಳಕಂಡ ನಮೂನೆಯಲ್ಲಿಯೇ ಭರ್ತಿಮಾಡತಕ್ಕದ್ದು.

(ರೂ.ಲಕ್ಷಗಳಲ್ಲಿ)

| Sl. No | SH NO | Description | Renewal | | Strengthening | | Widening | | Year of Execution | Scheme |
|---|---|---|---|---|---|---|---|---|---|---|
| | | | Chainage | Length | Chainage | Length | Chainage | Length | | |
| | | | | | | | | | | |

10. ಕ್ರಿಯಾ ಯೋಜನೆಯನ್ನು ಈ ಕೆಳಕಂಡ ನಮೂನೆಯಲ್ಲಿಯೇ ಸಲ್ಲಿಸತಕ್ಕದ್ದು.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ವಿಸ ಕ್ಷೇತ್ರ | ರಾಜ್ಯ ಹೆದ್ದಾರಿ ಸಂಖ್ಯೆ | ರಾಜ್ಯ ಹೆದ್ದಾರಿ ವಿವರ | ಸರಪಳಿ (ಪ್ರಾ-ಅಂತ್ಯ) | ಉದ್ದ | ಅಂದಾಜು ಮೊತ್ತ | ಷರಾ |
|---|---|---|---|---|---|---|---|---|---|
| | | | | | | | | | |

ತಮ್ಮ ನಂಬುಗೆಯ,

15/4

(ಎನ್.ಲಕ್ಷ್ಮಣರಾವ್ ಪೇಶ್ವೆ)
ಸರ್ಕಾರದ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ